# ಕರ್ನಾಟಕ ವಿಧಾನ ಸಭೆ

(ಹದಿನೈದನೇ ವಿಧಾನ ಸಭೆ)

**ಲಘು ಪ್ರಕಟಣೆ ಭಾಗ-2**

(ಸಾಂಸದಿಕ ಹಾಗು ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

ದಿನಾಂಕ 06ನೇ ಮಾರ್ಚ್, 2021

ಸಂಖ್ಯೆಃ 163

ಲೋಕಸಭಾ ಸಚಿವಾಲಯದ ಸಂಸದೀಯ ಸಂಶೋಧನಾ ಮತ್ತು ತರಬೇತಿ ಸಂಸ್ಥೆಯ ವತಿಯಿಂದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಮೊಟ್ಟ ಮೊದಲ ಬಾರಿಗೆ ಒಂದು ವಾರ ಕಾಲ ಆಯೋಜಿಸಲಾಗುತ್ತಿದೆ. ಸದರಿ ಕಾರ್ಯಕ್ರಮದಲ್ಲಿ ಲೋಕಸಭಾ ಸಚಿವಾಲಯದ ನುರಿತ ಉಪನ್ಯಾಸಕರಿಂದ ದಿನಾಂಕ 08.03.2021ರಿಂದ 12.03.2021ರವರೆಗೆ ಮಹಿಳಾ ಸಬಲೀಕರಣದ ಸಂಬಂಧ ಮಹಿಳಾ ಮೀಸಲಾತಿ ಮಸೂದೆ, ಆಸ್ತಿ ಅನುವಂಶಿಕತೆಗಳು, ಕೌಟುಂಬಿಕ ಹಿಂಸೆಗಳು, ಕ್ರೀಡೆಗಳಲ್ಲಿ ಗುರುತಿಸುವುದು, ಸಾಮಾಜಿಕ ಮಾಧ್ಯಮಗಳು ಮತ್ತು ಮಹಿಳೆಯರ ಖಾಸಗಿ ವಿಷಯಗಳು ಇವುಗಳ ಕುರಿತು ಆನ್‌ಲೈನ್ ಮೂಲಕ ಉಪನ್ಯಾಸವನ್ನು ನೀಡಲಿದ್ದಾರೆ.

ಆದುದರಿಂದ, ದಿನಾಂಕಃ 08.03.2021ರಿಂದ 12.03.2021ರವರೆಗೆ ಬೆಳಗ್ಗೆ 10.30ರಿಂದ 1.30ರವರೆಗೆ ಆಯೋಜಿಸಲಾಗಿರುವ ಉಪನ್ಯಾಸದಲ್ಲಿ ಎಲ್ಲಾ ಮಾನ್ಯ ಸದಸ್ಯರುಗಳು ವೆಬ್‌ಲಿಂಕ್ಃ **https://webcast.gov.in/Parliament/** ರಲ್ಲಿ ಆನ್‌ಲೈನ್ ಮೂಲಕ ಪಾಲ್ಗೊಂಡು ಅದರ ಸದುಪಯೋಗವನ್ನು ಪಡೆಯಬೇಕೆಂದು ಮಾನ್ಯ ಸಭಾಧ್ಯಕ್ಷರು ಸೂಚಿಸಿರುತ್ತಾರೆಂದು ಈ ಮೂಲಕ ಎಲ್ಲಾ ಮಾನ್ಯ ಸದಸ್ಯರುಗಳಿಗೆ ತಿಳಿಯಪಡಿಸಲಾಗಿದೆ.

**ಎಂ.ಕೆ.ವಿಶಾಲಾಕ್ಷಿ**
ಕಾರ್ಯದರ್ಶಿ(ಪ್ರ)

**ಕರ್ನಾಟಕ ವಿಧಾನ ಪರಿಷತ್ತಿನ ಹಾಗೂ ವಿಧಾನ ಸಭೆಯ ಎಲ್ಲಾ ಮಾನ್ಯ ಸದಸ್ಯರುಗಳಿಗೆ.**